**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ಹೆಚ್.ಆರ್.ಎಂ.ಎಸ್./13/2017

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:06-05-2017

**ಸುತ್ತೋಲೆ**

ವಿಷಯ ದಿನಾಂಕ:28-03-2017 ರಿಂದ 11-04-2017ರ ಅವಧಿಯಲ್ಲಿ ಹೆಚ್ಆರ್ಎಂಎಸ್ ಮುಖಾಂತರ ವೇತನ ಬಿಲ್ಲು ಅನುಮೋದನೆಗೊಂಡಿರುವ ಮತ್ತು ಅಳವಡಿಸಿರುವ ದಾಖಲೆಗಳು ಸರಿ ಇರುವ ಬಗ್ಗೆ ಪರಿಶೀಲಿಸುವ ಕುರಿತು

ಉಲ್ಲೇಖ 1 ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ:21:ಇಆಇ:2017 ದಿ:3-5-17
2 ಅರೆ ಸರ್ಕಾರಿ ಪತ್ರ ಸಂಖ್ಯೆ:ಇಡಿ:80:ಹೆಚ್ಪಿಯು:2017 ದಿ:4-5-2017

****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಸುತ್ತೋಲೆ ಮತ್ತು ಅರೆ ಸರ್ಕಾರಿ ಪತ್ರದ ಪ್ರಕಾರ ದಿನಾಂಕ: 11-04-2017 ರಿಂದ 19-04-2017ರ ಅವಧಿಯಲ್ಲಿ ಎಚ್.ಆರ್.ಎಂ.ಎಸ್. ದುರಸ್ತಿಯಲ್ಲಿದ್ದು ತದನಂತರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದುರಸ್ತಿ ನಂತರ ದಿನಾಂಕ:28-03-2017 ರಿಂದ 11-04-2017ರ ಅವಧಿಯಲ್ಲಿ ಹೆಚ್.ಆರ್.ಎಂ.ಎಸ್. ಮುಖಾಂತರ ವೇತನ ಬಿಲ್ಲು ಅನುಮೋದನೆಗೊಂಡಿರುವ ಮತ್ತು ಅಳವಡಿಸಿರುವ ದಾಖಲೆಗಳಲ್ಲಿ ನ್ಯೂನ್ಯತೆ/ವ್ಯತ್ಯಾಸಗಳು ಕಂಡುಬಂದಿರುವುದನ್ನು ಹಲವಾರು ಬಟವಾಡೆ ಅಧಿಕಾರಿಗಳು ವರದಿ ಮಾಡಿರುವುದಾಗಿ ತಿಳಿಸಿದ್ದು, ಅಂತಹ ಎಂಟು ಪ್ರಕರಣಗಳನ್ನು ಪಟ್ಟಿ ಮಾಡಿ ಉಲ್ಲೇಖ(1)ರಲ್ಲಿ ನಮೂದಿಸಲಾಗಿರುತ್ತದೆ.

ಆದ್ದರಿಂದ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳ ಗಮನಕ್ಕೆ ತರಬಯಸುವುದೇನೆಂದರೆ, ತಮ್ಮ ಕಛೇರಿ/ಕಾಲೇಜುಗಳಲ್ಲಿ ದಿನಾಂಕ:28-03-2017 ರಿಂದ 11-04-2017ರ ಅವಧಿಯಲ್ಲಿ ಹೆಚ್ಆರ್ಎಂಎಸ್ ಮುಖಾಂತರ ವೇತನ ಬಿಲ್ಲು ಅನುಮೋದನೆಗೊಂಡಿರುವ ಮತ್ತು ಅಳವಡಿಸಿರುವ ದಾಖಲೆಗಳನ್ನು ಪರಿಶೀಲಿಸಿ ನ್ಯೂನ್ಯತೆ/ವ್ಯತ್ಯಾಸಗಳು ಇಲ್ಲದಿದ್ದಲ್ಲಿ ಈ ಬಗ್ಗೆ ಶೂನ್ಯ ವರದಿಯನ್ನು ಅಥವಾ ಉಲ್ಲೇಖ(1)ರಲ್ಲಿ ಪಟ್ಟಿ ಮಾಡಿರುವ 08 ನ್ಯೂನ್ಯತೆ/ವ್ಯತ್ಯಾಸಗಳ ರೀತಿಯ ಪ್ರಕರಣಗಳಲ್ಲದೇ ಇನ್ನಿತರೆ ರೀತಿಯ ನ್ಯೂನ್ಯತೆ/ವ್ಯತ್ಯಾಸಗಳು ಕಂಡುಬಂದಲ್ಲಿ ಅಂತಹವುಗಳನ್ನು ಪಟ್ಟಿ ಮಾಡಿ ಜಂಟಿ ನಿರ್ದೇಶಕರು/ಪ್ರಾಂಶುಪಾಲರು ದೃಢೀಕರಿಸಿದ ಹಾರ್ಡ್ ಪ್ರತಿಯನ್ನು ದಿನಾಂಕ: 10-05-2017ರೊಳಗೆ ಕೇಂದ್ರ ಕಛೇರಿಗೆ ಸಲ್ಲಿಸಲು ಮತ್ತು ಸ್ಕ್ಯಾನ್ ಮಾಡಿದ ಹಾರ್ಡ್ ಪ್ರತಿಯನ್ನು ಇ-ಮೇಲ್ ವಿಳಾಸ: dce.hrms@gmail.com ಗೆ ದಿನಾಂಕ:10-05-2017ರೊಳಗೆ ಸಲ್ಲಿಸಲು ಕಟ್ಟುನಿಟ್ಟಾಗಿ ಸೂಚಿಸಿದೆ. ಒಂದು ವೇಳೆ ನ್ಯೂನ್ಯತೆ/ವ್ಯತ್ಯಾಸಗಳನ್ನು ಸರಿಪಡಿಕೊಳ್ಳದೇ ಇದ್ದಲ್ಲಿ ಹಾಗೂ ಈಗಾಗಲೇ ಹೆಚ್.ಆರ್.ಎಂ.ಎಸ್. ಮೂಲಕ ವೇತನ ಸೆಳೆದಿದ್ದರೂ ಮತ್ತೊಮ್ಮೆ ಸೆಳೆಯಲು ಪ್ರಯತ್ನಿಸಿರುವುದು ಸರ್ಕಾರ ಮುಖಾಂತರವಾಗಲಿ ಅಥವಾ ಈ ಕಛೇರಿ ಹಂತದಲ್ಲಿ ಗಮನಕ್ಕೆ ಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿ ನಿಯಮಾನುಸಾರ ಶಿಸ್ತು ಕ್ರಮಕ್ಕೈಗೊಳ್ಳಲಾಗುವುದು.

**ಅಡಕ: ಉಲ್ಲೇಖ(1) & (2)ರ ಪ್ರತಿ.**

**ಕಾಲೇಜು ಶಿಕ್ಷಣ ಆಯುಕ್ತರು**

ಇವರಿಗೆ,

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಮಾಹಿತಿ ಅಧಿಕಾರಿ, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇವರಿಗೆ ಸದರಿ ಸುತ್ತೋಲೆಯನ್ನು ಇಲಾಖಾ ಅಂತರ್ ಜಾಲದಲ್ಲಿ ಪ್ರಕಟಿಸಲು
4. ಕಛೇರಿ ಪ್ರತಿ.

**ಅಪರ್ಣಾ ಪಾವಟೆ**
ಸರ್ಕಾರದ ಉಪ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ಯೋಜನೆ)

ದೂರವಾಣಿ :22353954
ಕರ್ನಾಟಕ ಸರ್ಕಾರ ಸಚಿವಾಲಯ,
6ನೇ ಮಹಡಿ, ಬಹುಮಹಡಿ ಕಟ್ಟಡ,
ಬೆಂಗಳೂರು – 560 001.

**ಅ.ಸ.ಪತ್ರ ಸಂಖ್ಯೆ: ಇಡಿ 80 ಹೆಚ್‌ಪಿಯು 2017** 04.05.2017

ಮಾನ್ಯರೇ,

ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಇವರ ಸುತ್ತೋಲೆ ಸಂಖ್ಯೆ: ಸಿಆಸುಇ 21 ಇಆಇ 2017 ದಿ: 03.05.2017ನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಸುತ್ತೋಲೆಯಲ್ಲಿ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ (ಹೆಚ್.ಆರ್.ಎಂ.ಎಸ್) ಅಡಿ ದಿನಾಂಕ 28 ಮಾರ್ಚ್ 2017 ರಿಂದ 19 ಏಪ್ರಿಲ್ 2017ರ ಅವಧಿಯಲ್ಲಿ ಅಳವಡಿಸಿದ ದಾಖಲೆಗಳಲ್ಲಿ ಹಾಗೂ ಅನುಮೋದಿಸಿ ಸೆಳೆದ ಬಿಲ್ಲುಗಳಲ್ಲಿ ಹಲವು ವ್ಯತ್ಯಾಸ / ನ್ಯೂನತೆಗಳಾಗಿರುವುದು ಕಂಡುಬಂದಿರುವುದಾಗಿ ತಿಳಿಸಲಾಗಿರುತ್ತದೆ.

ಆದ್ದರಿಂದ, ಈ ಅವಧಿಯಲ್ಲಿ ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಅಳವಡಿಸಿದ ದಾಖಲೆಗಳನ್ನು ಸೂಕ್ಷ್ಮವಾಗಿ ಮರು ಪರಿಶೀಲಿಸಿ, ವ್ಯತ್ಯಾಸಗಳಿದ್ದಲ್ಲಿ ದಿ: 12 ಮೇ 2017ರ ಒಳಗಾಗಿ ಆಯಾ ಹೆಚ್.ಆರ್.ಎಂ.ಎಸ್ ಸಮನ್ವಯಾಧಿಕಾರಿಗಳ ಮೂಲಕ ಸರಿಪಡಿಸಿಕೊಳ್ಳಲು ಎಲ್ಲಾ ಬಡವಾಡೆ ಅಧಿಕಾರಿಗಳಿಗೆ ಸೂಚಿಸುವಂತೆ ತಿಳಿಸಿದೆ.

ಈಗಾಗಲೇ ಹೆಚ್.ಆರ್.ಎಂ.ಎಸ್. ಯೋಜನೆಯಲ್ಲಿ ಅನುಮೋದಿಸಿ ಸೆಳೆದಿರುವ ಬಿಲ್ಲುಗಳನ್ನು ಮತ್ತೊಮ್ಮೆ ತಯಾರಿಸಿ ದುರುಪಯೋಗಪಡಿಸಿಕೊಳ್ಳದಂತೆ ಬಟವಾಡೆ ಅಧಿಕಾರಿಗಳಿಗೆ ಸೂಚಿಸುವುದು. ಹಾಗೇನಾದರೂ ದುರುಪಯೋಗ ಪಡಿಸಿಕೊಂಡಿದ್ದು ಕಂಡುಬಂದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**ಡಾ: ಅಜಯ್ ನಾಗಭೂಷಣ್ ಎಂ.ಎನ್. ಭಾಆಸೇ,**
ಆಯುಕ್ತರು,
ಕಾಲೇಜು ಶಿಕ್ಷಣ ಇಲಾಖೆ,
ಬೆಂಗಳೂರು

URGENT

ಕಾ... ...ಯುಕ್ತರ
05 MAY 2017
ದಿನಾ...

A.O
Pl check
Rept

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 21 ಇಆಇ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 03ನೇ ಮೇ 2017.

## ಸುತ್ತೋಲೆ

ವಿಷಯ: ಮಾನವ ಸಂಪನ್ಮೂಲ ಯೋಜನೆಯಲ್ಲಿ ದಿನಾಂಕ: 28.03.2017 ಮತ್ತು ದಿನಾಂಕ: 11.04.2017 ನಡುವೆ ಅನುಮೋದನೆ ಮಾಡಿದ ವೇತನ ಮತ್ತು ಇತರೆ ಬಿಲ್‌ಗಳನ್ನು ಪುನರ್ ಪರಿಶೀಲಿಸುವ ಬಗ್ಗೆ.

* * * * * *

ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯು ದಿನಾಂಕ: 11ನೇ ಏಪ್ರಿಲ್ 2017 ರಿಂದ 19ನೇ ಏಪ್ರಿಲ್ 2017ರವರೆಗೆ ದುರಸ್ತಿಯಲ್ಲಿತ್ತು. ತದನಂತರ ಯೋಜನೆಯು ಕಾರ್ಯನಿರ್ವಹಿಸುತ್ತಿದ್ದು, ಬಹುತೇಕ ಬಟವಾಡೆ ಅಧಿಕಾರಿಗಳು ಸಮರ್ಪಕವಾಗಿ ಬಿಲ್ಲುಗಳನ್ನು ತಯಾರಿಸಿ ಅನುಮೋದಿಸಿರುತ್ತಾರೆ. ಯೋಜನೆಯನ್ನು ಬಳಸಿದ ಕೆಲವೊಂದು ಬಟವಾಡೆ ಅಧಿಕಾರಿಗಳು ಕೆಲವು ನ್ಯೂನ್ಯತೆಗಳನ್ನು/ವ್ಯತ್ಯಾಸಗಳನ್ನು ವರದಿ ಮಾಡಿದ್ದು ಅದರ ಪಟ್ಟಿ ಈ ಕೆಳಕಂಡಂತಿರುತ್ತದೆ.

03/05/2017

1) ಏಪ್ರಿಲ್ 2017ರ ವೇತನ ಸೆಳೆಯುವಾಗ, ಮಾರ್ಚ್ 2017ರ ವೇತನ ಸೆಳೆದಿದ್ದರು, ಸೆಳೆದಿಲ್ಲವೆಂಬ ಸಂದೇಶ ಬರುತ್ತಿದೆ.
2) ದಿ.28ನೇ ಮಾರ್ಚ್ 2017ರ ಮತ್ತು ದಿ.11ನೇ ಏಪ್ರಿಲ್ 2017ರ ನಡುವಿನ ವೇತನ ಮತ್ತು ಇತರ ಬಿಲ್ಲುಗಳನ್ನು ಪರಿಶೀಲಿಸಿದಾಗ ಕೆಲವು "ಅನುಮೋದಿತ" ಬಿಲ್‌ಗಳು ಕಂಡುಬರುತ್ತಿಲ್ಲ.
3) ಮುಂಗಡ ಮತ್ತು ಸಾಲದ ಕಟಾವಿನ ಕಂತು ಸಂಖ್ಯೆ ತಾಳೆಯಿಲ್ಲದಿರುವುದು.
4) ಮಾರ್ಚ್ ಮಾಹೆಯಲ್ಲಿ ವಾರ್ಷಿಕ ವೇತನ ಬಡ್ತಿ (ಇಂಕ್ರಿಮೆಂಟ್) ನೀಡಿದ್ದರು ಅದು ನೀಡಿರುವುದಿಲ್ಲದಂತೆ ಕಂಡುಬಂದಿರುವುದು.
5) ವರ್ಗಾವಣೆಯಿಂದ ಬಿಡುಗಡೆಯಾದ ನೌಕರರು ಮರಳಿ ಹಿಂದಿನ ಬಟವಾಡೆ ಅಧಿಕಾರಿಗಳಡಿ ಇರುವಂತೆ ತೋರುತ್ತಿರುವುದು.
6) ವೇತನ ಬಟವಾಡೆ ನಂತರ ವರ್ಗಾವಣೆಯಿಂದ ಬಿಡುಗಡೆ ಮಾಡಲಾದ ನೌಕರನ ವಿವರ ಹೊಸ ಬಟವಾಡೆ ಅಧಿಕಾರಿಯಡಿ ಬಂದಿದ್ದು ಅಲ್ಲಿಯೂ ಸಹ ಹಿಂದಿನ ಅಧಿಕಾರಿ ಪಾವತಿಸಿದ ವೇತನ ಪಾವತಿಸಿಲ್ಲವೆಂಬಂತೆ ತೋರುತ್ತಿರುವುದು.
7) ಮೇಲೆ ತಿಳಿಸಿದ ದಿನಾಂಕದಲ್ಲಿ ವೇತನ ಬಿಲ್ ತಯಾರಿಸುವ ಸಮಯದಲ್ಲಿ ಕೆಲವೊಂದು ನೌಕರರ ವೇತನ ತಡೆ ಹಿಡಿದಿದ್ದರೂ ಎಲ್ಲಾ ಸಿಬ್ಬಂದಿಯ ವೇತನ ಸೆಳೆದಂತೆ "ಅನುಮೋದಿತ" ಹಂತದಲ್ಲಿರುವುದು.
8) ಇವಲ್ಲದೆ ಇದೇ ರೀತಿ ದಿ.28ನೇ ಮಾರ್ಚ್ 2017 ಮತ್ತು 11ನೇ ಏಪ್ರಿಲ್ 2017ರ ನಡುವಿನಲ್ಲಿ ಅಳವಡಿಸಿದ/ಇಂದೀಕರಿಸಿದ ದಾಖಲೆಗಳ ವ್ಯತ್ಯಾಸ ಗಮನಿಸಲಾಗಿದೆ.

2. ಈ ದಿಶೆಯಲ್ಲಿ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ದಿ.28ನೇ ಮಾರ್ಚ್ 2017 ಮತ್ತು 11ನೇ ಏಪ್ರಿಲ್ 2017ರ ನಡುವಿನಲ್ಲಿ ತಾವು ಅಳವಡಿಸಿದ ದಾಖಲೆಗಳನ್ನು ಸರಿಯಾಗಿರುವುದೇ ಎಂಬುದನ್ನು ಪರಿಶೀಲಿಸಿ ಖಚಿತ ಪಡಿಸಿಕೊಳ್ಳುವಂತೆ ಸೂಚಿಸಿದೆ. ಒಂದು ವೇಳೆ ದಾಖಲೆಯಲ್ಲಿ ವ್ಯತ್ಯಾಸವಿದ್ದಲ್ಲಿ "ಬದಲಾದ ದಾಖಲೆ", "ಇರಬೇಕಾದ ದಾಖಲೆ" ಇವುಗಳನ್ನು ತಮ್ಮ ಇಲಾಖೆಯ ಹೆಚ್‌ಆರ್‌ಎಮ್‌ಎಸ್ ಸಮನ್ವಯಾಧಿಕಾರಿಗಳಿಗೆ ತಿಳಿಸಿ, ದೂರುದಾಖಲಿಸಿ ಸರಿಪಡಿಸಿಕೊಳ್ಳಲು ತಿಳಿಸಿದೆ. **ಈ ಕಾರ್ಯವನ್ನು 12ನೇ ಮೇ 2017ರ ಒಳಗಾಗಿ ಪೂರ್ಣಗೊಳಿಸಲು ಸೂಚಿಸಿದೆ.**

Urgent & Important

D.O. letter to all HODs to be sent today to direct all DDOs as per this circular.
4/5/17

DS (PJ) Now
4/5

...2

3. ಯಾವುದೇ ಕಾರಣಕ್ಕೂ ಯೋಜನೆಯಿಂದಾದ ನ್ಯೂನ್ಯತೆಯಿಂದಾಗಿ ಬಟವಾಡೆ ಅಧಿಕಾರಿಗಳು ಈಗಾಗಲೇ ಯೋಜನೆಯಲ್ಲಿ ಅನುಮೋದಿಸಿ ಸೆಳೆದಿರುವ ಬಿಲ್‌ಗಳನ್ನು ಮತ್ತೊಮ್ಮೆ ತಯಾರಿಸಿ ದುರುಪಯೋಗ ಪಡಿಸಿಕೊಳ್ಳದಂತೆ ಸೂಚಿಸಲು ತಿಳಿಸಿದೆ. ಹಾಗೇನಾದರು ದುರುಪಯೋಗ ಪಡಿಸಿಕೊಂಡದ್ದು ಕಂಡುಬಂದಲ್ಲಿ ನಿಯಮಾನುಸಾರ ಕ್ರಮಕ್ಕೈಗೊಳ್ಳತಕ್ಕದ್ದು.

(ಎ.ಎಸ್.ವಿಶ್ವೇಶ್ವರಯ್ಯ)
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ)

ಇವರಿಗೆ:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.